ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1311
ಸದಸ್ಯರ ಹೆಸರು : ಶ್ರೀ ಪ್ರದೀಪ್ ಶೆಟ್ಟರ್,
(ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು)
ಉತ್ತರಿಸುವ ದಿನಾಂಕ : 21.12.2018.
ಉತ್ತರಿಸುವ ಸಚಿವರು : ಉಪ ಮುಖ್ಯಮಂತ್ರಿಗಳು

ಕ್ರ.ಸಂ.	ವಿಷಯ	ಉತ್ತರ
ಅ	ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಇರುವಂತಹ ವಿದ್ಯಾನಗರ ಪೊಲೀಸ್ ಠಾಣೆಯಲ್ಲಿ 2014 ರಿಂದ 2019 ರವರೆಗೆ ದಾಖಲಾದಂತಹ ಪ್ರಕರಣಗಳ ಸಂಖ್ಯೆ ಎಷ್ಟು;	ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿನ ವಿದ್ಯಾನಗರ ಪೊಲೀಸ್ ಠಾಣೆಯಲ್ಲಿ 2014 ರಿಂದ 2019 ವರೆಗೆ ದಾಖಲಾಗಿರುವ ಪ್ರಕರಣಗಳ ಸಂಖ್ಯೆ ಈ ಕೆಳಕಂಡಂತಿದೆ.
ಆ	ಸದರಿ ಅವಧಿಯಲ್ಲಿ ದಾಖಲಾದ ಪ್ರಕರಣಗಳ ಬಗ್ಗೆ ಠಾಣಾಧಿಕಾರಿಗಳು ಕೈಗೊಂಡಿರುವಂತಹ ಕ್ರಮಗಳೇನು;	ಸದರಿ ಅವಧಿಯಲ್ಲಿ ದಾಖಲಾದ ಪ್ರಕರಣಗಳ ಬಗ್ಗೆ ಠಾಣಾಧಿಕಾರಿಗಳು ಕಾನೂನು ರೀತ್ಯಾ ಕ್ರಮ ಕೈಗೊಂಡಿದ್ದು, ಪ್ರಕರಣಗಳ ತನಿಖೆ ಮಾಡಿ ಹೆಚ್ಚಿನ ಪ್ರಕರಣಗಳಲ್ಲಿ ಈಗಾಗಲೇ ಮಾನ್ಯ ನ್ಯಾಯಾಲಯಕ್ಕೆ ಅಂತಿಮ ವರದಿಯನ್ನು ಸಲ್ಲಿಸಲಾಗಿದೆ.
ಇ	2014 ರಿಂದ 2019ರ ಅವಧಿಗಳಲ್ಲಿ ದಾಖಲಾದ ಪ್ರಕರಣಗಳಲ್ಲಿ ಬಾಕಿ ಇರುವಂತಹ ಪ್ರಕರಣಗಳೆಷ್ಟು; ಇದ್ದಲ್ಲಿ, ಬಾಕಿ ಉಳಿಸಿಕೊಳ್ಳಲು ಕಾರಣಗಳೇನು? (ವಿವರ ನೀಡುವುದು)	2014 ರಿಂದ 2019 ಅವಧಿಗಳಲ್ಲಿ ದಾಖಲು ಮಾಡಿದ ಪ್ರಕರಣಗಳ ಪೈಕಿ ಬಾಕಿ ಇರುವಂತಹ ಪ್ರಕರಣಗಳು ಈ ಕೆಳಕಂಡಂತಿದೆ.

(ಅ) ಉತ್ತರದ ಕೋಷ್ಟಕ:

ವರ್ಷ	ದಾಖಲಾದ ಪ್ರಕರಣಗಳು
2014	168
2015	227
2016	274
2017	331
2018 (ನವಂಬರ್ ವರೆಗೆ)	153

(ಇ) ಉತ್ತರದ ಕೋಷ್ಟಕ:

ವರ್ಷ	ಬಾಕಿ ಇರುವ ಪ್ರಕರಣಗಳು
2014	–
2015	–
2016	8
2017	72
2018 (ನವಂಬರ್‌ವರೆಗೆ)	85

ಬಾಕಿ ಉಳಿಯಲು ಕಾರಣಗಳು

ಸ್ವತ್ತು ಕಳವು ಪ್ರಕರಣಗಳಲ್ಲಿ ಮಾಲು ಮತ್ತು ಆರೋಪಿಗಳನ್ನು ಪತ್ತೆ ಮಾಡಬೇಕಾಗಿರುತ್ತದೆ.

ತನಿಖೆ ಪೂರ್ಣಗೊಂಡ ಪ್ರಕರಣಗಳಲ್ಲಿ ದೋಷರೋಪಣೆ ಪಟ್ಟಿ ತಯಾರಿಸಿ, ಮಾನ್ಯ ನ್ಯಾಯಾಲಯಗಳಿಗೆ ಸಲ್ಲಿಸಬೇಕಾಗಿರುತ್ತದೆ.
ತನಿಖೆಯಲ್ಲಿರುವ ಪ್ರಕರಣಗಳಲ್ಲಿ ಸಾಕ್ಷಿ ಸಂಗ್ರಹಿಸುವುದು ಹಾಗೂ ತಜ್ಞರ ಅಭಿಪ್ರಾಯ ವರದಿ ಪಡೆಯಲು ಬಾಕಿ ಇರುತ್ತದೆ.
ಕಾಣೆಯಾದ ಪ್ರಕರಣಗಳಲ್ಲಿ ಕಾಣೆಯಾದವರನ್ನು ಪತ್ತೆ ಹಚ್ಚಬೇಕಾಗಿರುತ್ತದೆ.

(ಡಾ. ಜಿ. ಪರಮೇಶ್ವರ)
ಉಪ ಮುಖ್ಯಮಂತ್ರಿ

ಹೆಚ್‌ಡಿ 10 ಬೆಳಗಾವಿ 2018